Order Copy

Original Copy

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ವಸತಿ ಯೋಜನೆಗಳಡಿ ಬಾಕಿ ಇರುವ ಫಲಾನುಭವಿಗಳ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ವಇ 20 ಹೆಚ್‌ಎಹೆಚ್ 2011, ದಿನಾಂಕ:08.05.2012.
2. 2014-15ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ ಭಾಷಣದ ಕಂಡಿಕೆ 228.
3. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಇವರ ಪತ್ರ ಸಂಖ್ಯೆ: MD RGRHCL 01 SD 01 2014, ದಿನಾಂಕ:19.03.2014

ಪ್ರಸ್ತಾವನೆ:

ಮೇಲೆ ಓದಲಾಗಿರುವ (2)ರಲ್ಲಿ ಮಾನ್ಯ ಮುಖ್ಯಮಂತ್ರಿಯವರು 2014-15ನೇ ಸಾಲಿನ ಆಯವ್ಯಯದ ಭಾಷಣದ ಕಂಡಿಕೆ 228ರಲ್ಲಿ ಈ ಕೆಳಕಂಡಂತೆ ಘೋಷಣೆ ಮಾಡಿರುತ್ತಾರೆ.

> "ಸರ್ಕಾರವು ಆಶ್ರಯ ಯೋಜನೆಯಡಿ 10.84 ಲಕ್ಷ ಫಲಾನುಭವಿಗಳಿಗೆ 1498 ಕೋಟಿ ರೂಪಾಯಿಗಳ ಸಾಲವನ್ನು ನೀಡಿತ್ತು. "ನನ್ನ ಮನೆ ನನ್ನ ಸ್ವತ್ತು ಯೋಜನೆ" ಜಾರಿಯಾದ ಮೇಲೆ ಈವರೆಗೆ 39 ಕೋಟಿ ರೂ.ಗಳ ಸಾಲ ವಸೂಲಾತಿಯಾಗಿದೆ. ಇನ್ನೂ 1458 ಕೋಟಿ ರೂ.ಗಳ ಅಸಲು ಹಾಗೂ 1030 ಕೋಟಿ ಬಡ್ಡಿ ಬಾಕಿ ಇದೆ. ಸದರಿ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಲು ಉದ್ದೇಶಿಸಿದೆ. ಇದರಿಂದ 10.84 ಲಕ್ಷ ಫಲಾನುಭವಿಗಳಿಗೆ ಅನುಕೂಲವಾಗಲಿದೆ."

ರಾಜ್ಯ ಸರ್ಕಾರವು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವಸತಿ ರಹಿತರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲು ಹಲವಾರು ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿರುತ್ತದೆ. 2008-09ನೇ ಶ್ರೇಣಿಯವರೆಗೆ ಗ್ರಾಮೀಣ ಆಶ್ರಯ, ನಗರ ಆಶ್ರಯ ಮತ್ತಿತರ ವಸತಿ ಯೋಜನೆಗಳ ಮೂಲಕ ಅರ್ಹ ಫಲಾನುಭವಿಗಳಿಗೆ ಭಾಗಶಃ ಸಾಲ ಹಾಗೂ ಭಾಗಶಃ ಸಹಾಯಧನ ನೀಡಿ ಮನೆಗಳನ್ನು ನಿರ್ಮಿಸಲಾಗಿರುತ್ತದೆ. ಈ ಭಾಗಶಃ ಸಾಲವನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಹುಡ್ಕೋ ಮತ್ತು ಇತರೆ ಹಣಕಾಸು ಸಂಸ್ಥೆಗಳಿಂದ ಅಂದರೆ ವಾಣಿಜ್ಯ ಬ್ಯಾಂಕುಗಳಿಂದ ಪಡೆಯಲಾಗಿದೆ. ಹೀಗೆ ಪಡೆದ ಸಾಲವನ್ನು ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸಿ ನಿಗಮಕ್ಕೆ ನೀಡಲಾಗುತ್ತದೆ. ಈ ಸಾಲದ ರೂಪದ ಹಣವನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಸ್ಥಳೀಯ ಸಂಸ್ಥೆಗಳ ಮೂಲಕ ಫಲಾನುಭವಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ನೀಡಲಾಗಿರುತ್ತದೆ. ಈ ಮೊತ್ತವನ್ನು ವಾರ್ಷಿಕ ಶೇ.11%ರ ಬಡ್ಡಿ ಸಹಿತ 180 ಸಮ ಕಂತುಗಳಲ್ಲಿ ಫಲಾನುಭವಿಗಳು ಸ್ಥಳೀಯ ಸಂಸ್ಥೆಗಳ ಮುಖಾಂತರ ಸರ್ಕಾರದ ಬೊಕ್ಕಸಕ್ಕೆ ಮರುಪಾವತಿ ಮಾಡಬೇಕಾಗಿರುತ್ತದೆ.

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು 2008-09ನೇ ಶ್ರೇಣಿಯವರೆಗಿನ ಮನೆಗಳಿಗೆ ರೂ.863.54ಕೋಟಿಗಳ ಸಾಲವನ್ನು ಪಡೆದಿದೆ. ಸದರಿ ಸಾಲಕ್ಕೆ ಎದುರಾಗಿ ಈವರೆಗೂ ರೂ.633.56ಕೋಟಿಗಳ ಅಸಲನ್ನು ಮತ್ತು ರೂ.517.74ಕೋಟಿಗಳ ಬಡ್ಡಿ ಮರುಪಾವತಿಸಲಾಗಿದೆ. ಪ್ರಸ್ತುತ ಹುಡ್ಕೋ ಮತ್ತು ಇತರೆ ಹಣಕಾಸು ಸಂಸ್ಥೆಗಳಿಗೆ ಇನ್ನು ರೂ.229.99ಕೋಟಿಗಳ ಅಸಲು ಮರುಪಾವತಿ ಬಾಕಿ ಇರುತ್ತದೆ. ಇದಲ್ಲದೆ ಸರ್ಕಾರವು 2005-06ನೇ ಸಾಲಿನಿಂದ 2009-10ನೇ ಸಾಲಿನವರೆಗೆ ರೂ.597.40ಕೋಟಿಗಳನ್ನು ಆಯವ್ಯಯದಲ್ಲಿ ಸಾಲದ ರೂಪದಲ್ಲಿ ಒದಗಿಸಿದೆ. ಈ ಸಂಪೂರ್ಣ ಸಾಲವನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಒಟ್ಟಾರೆ ರೂ.1460.94ಕೋಟಿಗಳ ಸಾಲವನ್ನು ನಿಗಮಕ್ಕೆ ಬಿಡುಗಡೆ ಮಾಡಲಾಗಿರುತ್ತದೆ. (ರೂ.863.54ಕೋಟಿಗಳನ್ನು ಹಣಕಾಸು ಸಂಸ್ಥೆಗಳಿಂದ ಸರ್ಕಾರದ ಖಾತರಿ ಮೇಲೆ ಪಡೆಯಲಾದ ಸಾಲ+ರೂ.597.40ಕೋಟಿಗಳು ಸರ್ಕಾರವು ಆಯವ್ಯಯದಲ್ಲಿ ಒದಗಿಸಿದ ಸಾಲದ ಮೊತ್ತ)

2008-09ನೇ ಸಾಲಿನವರೆಗೆ ವಿವಿಧ ವಸತಿ ಯೋಜನೆಗಳಡಿಯಲ್ಲಿ ಸರ್ಕಾರದ ಸಹಾಯಧನದ ಜೊತೆಗೆ ಫಲಾನುಭವಿಗಳಿಗೆ ಸಾಲವನ್ನು ನೀಡಲಾಗಿದ್ದು, ಫಲಾನುಭವಿಗಳು ಸಾಲದ ಕಂತುಗಳನ್ನು ಪಾವತಿಸದೆ ಬಾಕಿ ಉಳಿಸಿಕೊಂಡಿರುತ್ತಾರೆ. ಫಲಾನುಭವಿಗಳ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ಅಂದಿನ ಸರ್ಕಾರವು "ನನ್ನ ಮನೆ ನನ್ನ ಸ್ವತ್ತು" ಎಂಬ ನೂತನ ಯೋಜನೆಯನ್ನು ಆಯವ್ಯಯದಲ್ಲಿ ಘೋಷಣೆ ಮಾಡಿರುತ್ತದೆ. ಈ ಘೋಷಣೆಯನ್ವಯ ಫಲಾನುಭವಿಗಳು ಮಾರ್ಚ್-2012ರ ಅಂತ್ಯದವರೆಗೆ ಬಾಕಿ ಅಸಲನ್ನು ಪಾವತಿಸಿದಲ್ಲಿ ಸಂಪೂರ್ಣ ಬಡ್ಡಿಯನ್ನು ಮನ್ನಾ ಮಾಡಲು ಆದೇಶ ಹೊರಡಿಸಲಾಗಿರುತ್ತದೆ. ನಂತರ ಸದರಿ ಸ್ವತ್ತನ್ನು ಫಲಾನುಭವಿಗೆ ಅಡಮಾನದಿಂದ ಮುಕ್ತಿಗೊಳಿಸಲು ಓದಲಾಗಿರುವ (1)ರ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿರುತ್ತದೆ. "ನನ್ನ ಮನೆ ನನ್ನ ಸ್ವತ್ತು" ಯೋಜನೆಯಡಿ ಸಾಲ ಮರುಪಾವತಿ ಮಾಡುವ ಗಡುವನ್ನು 2013-14ನೇ ಸಾಲಿಗೆ ಮುಂದುವರಿಸಲಾಗಿತ್ತು.

ಪ್ರಸ್ತುತ 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿನ ಘೋಷಣೆಯ ಹಿನ್ನೆಲೆಯಲ್ಲಿ ಸಾಲ ಮನ್ನಾ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. "ನನ್ನ ಮನೆ ನನ್ನ ಸ್ವತ್ತು" ಯೋಜನೆ ಜಾರಿಯಾದ ನಂತರವೂ ಸುಮಾರು 1458 ಕೋಟಿ ಅಸಲು ಹಾಗೂ ರೂ.1030 ಕೋಟಿ ಬಡ್ಡಿ ಮೊತ್ತವು ಫಲಾನುಭವಿಗಳಿಂದ ಮರುಪಾವತಿಸಲು ಬಾಕಿ ಇರುತ್ತದೆ. ಈ ಬಗ್ಗೆ ಜಿಲ್ಲಾವಾರು ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. ಸರ್ಕಾರದ ಘೋಷಣೆಯ ಪ್ರಕಾರ ಸಾಲ ಮತ್ತು ಬಡ್ಡಿ ಮನ್ನಾ ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಅನುಬಂಧ-2ರಲ್ಲಿ ನೀಡಿ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ವಇ 31 ಹೆಚ್ಎಹೆಚ್ 2013, ಬೆಂಗಳೂರು, ದಿನಾಂಕ:03.09.2014**

ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳಿಗೆ ನೀಡಿರುವ ಬಾಕಿ ಇರುವ ಸಾಲ ಮನ್ನಾ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಸರ್ಕಾರವು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವಸತಿ ರಹಿತರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲು ವಿವಿಧ ವಸತಿ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಭಾಗಶಃ ಸಾಲ ಮತ್ತು ಭಾಗಶಃ ಸಹಾಯಧನ ನೀಡಿ ಮನೆಗಳನ್ನು ನಿರ್ಮಿಸಲಾಗಿರುತ್ತದೆ. ಫಲಾನುಭವಿಗಳು ಭಾಗಶಃ ಸಾಲವನ್ನು ವಾರ್ಷಿಕ ಶೇ.11%ರ ಬಡ್ಡಿ ಸಹಿತ 180 ಸಮಕಂತುಗಳಲ್ಲಿ ಸ್ಥಳೀಯ ಸಂಸ್ಥೆಗಳ ಮುಖಾಂತರ ಸರ್ಕಾರದ ಬೊಕ್ಕಸಕ್ಕೆ ಮರುಪಾವತಿಸಬೇಕಾಗಿರುತ್ತದೆ. ಸರ್ಕಾರವು ಈ ಸಾಲದ ಮೊತ್ತವನ್ನು ಹುಡ್ಕೋ ಮತ್ತು ಇತರ ವಾಣಿಜ್ಯ ಬ್ಯಾಂಕುಗಳಿಂದ ಪಡೆದಿರುತ್ತದೆ. ಈ ಸಾಲದ ಮೊತ್ತವನ್ನು ಪ್ರತಿ ವರ್ಷ ಆಯವ್ಯಯದಲ್ಲಿ ಅನುದಾನ ಒದಗಿಸಿಕೊಂಡು ಹಣಕಾಸು ಸಂಸ್ಥೆಗಳಿಗೆ ಸರ್ಕಾರದಿಂದ ಸಾಲ ಮರುಪಾವತಿ ಮಾಡಲಾಗುತ್ತಿದೆ. ಜೊತೆಗೆ ಸರ್ಕಾರವು 2005ನೇ ಸಾಲಿನಿಂದ 2009-10ನೇ ಸಾಲಿವರೆಗೆ ರೂ.597.40ಕೋಟಿಗಳನ್ನು ಆಯವ್ಯಯದಲ್ಲಿ ಸಾಲದ ರೂಪದಲ್ಲಿ ಒದಗಿಸಿ ಈ ಮೊತ್ತವನ್ನು ಸಂಪೂರ್ಣವಾಗಿ ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.

2011-12ನೇ ಸಾಲಿನಲ್ಲಿ "ನನ್ನ ಮನೆ ನನ್ನ ಸ್ವತ್ತು" ಎಂಬ ನೂತನ ಯೋಜನೆಯನ್ನು ಜಾರಿಗೊಳಿಸಿ ಫಲಾನುಭವಿಗಳು ಪಡೆದ ಸಾಲವನ್ನು ಆ ಹಣಕಾಸು ವರ್ಷದಲ್ಲಿ ಸಂಪೂರ್ಣ ಬಾಕಿ ಇರುವ ಅಸಲನ್ನು ಪಾವತಿಸಿದಲ್ಲಿ ಸಂಪೂರ್ಣ ಬಡ್ಡಿ ಮನ್ನಾ ಮಾಡಿ, ಅವರ ಸ್ವತ್ತನ್ನು ಅಡಮಾನದಿಂದ ಮುಕ್ತಗೊಳಿಸಲು ಆದೇಶಿಸಲಾಗಿರುತ್ತದೆ.

**"ನನ್ನ ಮನೆ ನನ್ನ ಸ್ವತ್ತು" ಯೋಜನೆ ಜಾರಿಯಾದ ನಂತರವೂ, ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳಿಂದ ಮರುಪಾವತಿಸಲು ರೂ.1458.48 ಕೋಟಿ ಅಸಲು ಹಾಗೂ ರೂ.1030.41 ಕೋಟಿ ಬಡ್ಡಿ ಸೇರಿ ಒಟ್ಟು ರೂ.2488.89 ಕೋಟಿಗಳು ಬಾಕಿ ಇರುವ ಅಸಲು ಮತ್ತು ಬಡ್ಡಿಯನ್ನು ಸರ್ಕಾರವು ಸಂಪೂರ್ಣವಾಗಿ ಮನ್ನಾ ಮಾಡಿ ಆದೇಶಿಸಿದೆ.**

ಈ ಆದೇಶದನ್ವಯ ಫಲಾನುಭವಿಗಳ ಸ್ವತ್ತನ್ನು ಅಡಮಾನದಿಂದ ಮುಕ್ತಗೊಳಿಸಿ ಸಂಬಂಧಪಟ್ಟ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಇವರಿಗೆ ಸೂಚಿಸಿದೆ. ಬಾಕಿ ಇರುವ ಬಗ್ಗೆ ಜಿಲ್ಲಾವಾರು ವಿವರವನ್ನು ಅನುಬಂಧ–1ರಲ್ಲಿ ಹಾಗೂ ಸರ್ಕಾರದ ಆದೇಶದನ್ವಯ ಸಾಲ ಮತ್ತು ಬಡ್ಡಿ ಮನ್ನಾ ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಅನುಬಂಧ–2ರಲ್ಲಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಬಿ.ಶಂಕರಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ವಸತಿ ಇಲಾಖೆ(ವಸತಿ–2)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಎ & ಇ) (ಆಡಳಿತ–1&2) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು,
3. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಎಲ್ಲಾ ವಿಭಾಗಾಧಿಕಾರಿಗಳು.
6. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.
7. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
8. ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು.
9. ಎಲ್ಲಾ ತಾಲ್ಲೂಕು ತಹಶೀಲ್ದಾರರು.
10. ಎಲ್ಲಾ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯ್ತಿ.
11. ಎಲ್ಲಾ ನಗರಸಭೆಗಳ ಆಯುಕ್ತರು.

(Items 4–11: ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ)

12. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ (ಪ್ರಕರಣ ಸಂಖ್ಯೆ:ಸಿ:475/2014), ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–9), ವಿಧಾನಸೌಧ, ಬೆಂಗಳೂರು.
14. ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
15. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಸತಿ ಇಲಾಖೆ, ಬೆಂಗಳೂರು.
16. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕ, ವಸತಿ ಇಲಾಖೆ, ಬೆಂಗಳೂರು.

| ಸರ್ಕಾರದ ಆದೇಶ ಸಂಖ್ಯೆ: ವ ಇ 31 ಹೆಚ್‌ಎಹೆಚ್ 2013, ದಿನಾಂಕ:1.9.2014ಕ್ಕೆ ಅನುಬಂಧ-1 | | | | |
|---|---|---|---|---|
| **District Name** | **Total No of Loanees** | **Principal Due** | **Interest due** | **Total Due** |
| 1 | 2 | 3 | 4 | 5 |
| Bagalkot | 33305 | 463715060 | 348296311 | 812011371 |
| BangaloreRural | 16459 | 215210969 | 165645006 | 380855975 |
| BangaloreUrban | 15601 | 207084736 | 143697855 | 350782591 |
| Belgaum | 87182 | 1169938170 | 777182641 | 1947120811 |
| Bellary | 48372 | 689995710 | 527400887 | 1217396597 |
| Bidar | 27923 | 380860930 | 265870831 | 646731761 |
| Bijapur | 36578 | 482859475 | 359293412 | 842152887 |
| Chamarajanagar | 20727 | 281687175 | 204392043 | 486079218 |
| Chikkballapura | 24400 | 312313902 | 224665585 | 536979487 |
| Chikmagalur | 29795 | 380724176 | 252648893 | 633373069 |
| Chitradurga | 35354 | 492507897 | 348070420 | 840578317 |
| DakshinaKannada | 34282 | 414164547 | 221496390 | 635660937 |
| Davanagere | 42911 | 625354123 | 491182204 | 1116536327 |
| Dharwad | 33248 | 510003371 | 362503167 | 872506538 |
| Gadag | 32373 | 470735882 | 358344373 | 829080255 |
| Gulbarga | 45643 | 627689500 | 462364157 | 1090053657 |
| Hassan | 50589 | 664592826 | 502051705 | 1166644531 |
| Haveri | 36455 | 490804846 | 323793378 | 814598224 |
| Kodagu | 10649 | 134122830 | 88009177 | 222132007 |
| Kolar | 30543 | 409791487 | 298088808 | 707880295 |
| Koppal | 34880 | 437244032 | 297996618 | 735240650 |
| Mandya | 46416 | 635838086 | 464696775 | 1100534861 |
| Mysore | 45573 | 631603833 | 481891050 | 1113494883 |
| Raichur | 32944 | 417160991 | 329051887 | 746212878 |
| Ramanagara | 35409 | 445430430 | 318553714 | 763984144 |
| Shimoga | 44090 | 602287364 | 406353408 | 1008640772 |
| Tumkur | 58275 | 777152031 | 501469575 | 1278621606 |
| Udupi | 26495 | 313735057 | 171077759 | 484812816 |
| UttaraKannada | 43420 | 565945848 | 376280083 | 942225931 |
| Yadgir | 24597 | 334220000 | 231800434 | 566020434 |
| **Total** | **1084488** | **14584775284** | **10304168548** | **24888943832** |
| **Rs in Crores** | | **1458.48** | **1030.42** | **2488.89** |

(ಬಿ.ಶಂಕರಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ವಸತಿ ಇಲಾಖೆ (ವಸತಿ-2)

## ಸರ್ಕಾರದ ಆದೇಶ ಸಂಖ್ಯೆ:ವಇ 31 ಹೆಚ್ಎಹೆಚ್ 2013 ದಿನಾಂಕ:1.9.2014ಕ್ಕೆ ಅನುಬಂಧ–2

ವಿವಿಧ ವಸತಿ ಯೋಜನೆಗಳಡಿ ಸರ್ಕಾರದಿಂದ ಮನೆಗಳ ನಿರ್ಮಾಣಕ್ಕಾಗಿ ನೀಡಲಾದ ಸಾಲ ಮತ್ತು ಬಡ್ಡಿಯನ್ನುಸಂಪೂರ್ಣ ಮನ್ನಾ ಮಾಡಲಾಗಿದ್ದು, ಈ ಸಂಬಂಧ ಅನುಸರಿಸಬೇಕಾದ ಮಾರ್ಗಸೂಚಿಗಳು.

1. ಮೇಲೆ ತಿಳಿಸಿದ ಗ್ರಾಮೀಣ ಮತ್ತು ನಗರ ವಸತಿ ಯೋಜನೆಗಳಡಿ ಸಾಲ/ಸಾಲ& ಸಹಾಯಧನ ಪಡೆದ ಎಲ್ಲಾ ಫಲಾನುಭವಿಗಳ ಬಾಕಿ ಸಾಲ ಮತ್ತು ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗಿರುತ್ತದೆ. ಇದು ಸ್ವಂತ ನಿವೇಶನದಲ್ಲಿ ಮನೆ ನಿರ್ಮಿಸಿಕೊಂಡ ಹಾಗೂ ಸರ್ಕಾರದ ನೆರವಿನಿಂದ ನಿವೇಶನವನ್ನು ಪಡೆದು, ಮನೆ ನಿರ್ಮಿಸಿದ ಎಲ್ಲಾ ಫಲಾನುಭವಿಗಳಿಗೂ ಅನ್ವಯಿಸುತ್ತದೆ.

2. ಸರ್ಕಾರದಿಂದ ವಸತಿ/ವಸತಿ & ನಿವೇಶನ ಸೌಲಭ್ಯವನ್ನು ಪಡೆದು ಸಾಲವನ್ನು ಮರುಪಾವತಿಸದೇ ಇರುವ ಕಾರಣದಿಂದ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ತಡೆಹಿಡಿದಿದ್ದಲ್ಲಿ ಅಂತಹ ಎಲ್ಲಾ ಫಲಾನುಭವಿಗಳಿಗೆ ಮೂಲ ಹಕ್ಕುಪತ್ರವನ್ನು ವಿತರಿಸುವುದು.

3. ಸರ್ಕಾರದಿಂದ ಸಾಲ/ಸಹಾಯಧನ ಪಡೆದ ಫಲಾನುಭವಿಗಳು ನಿರ್ಮಿಸಿದ ಮನೆಯನ್ನು ನಮೂನೆ–3/3ಎರಲ್ಲಿ ಸರ್ಕಾರಕ್ಕೆ 15 ವರ್ಷಗಳ ಅವಧಿಗೆ ಅಡಮಾನ ಮಾಡಿಕೊಳ್ಳಲಾಗಿರುತ್ತದೆ. ಇದರ ಉದ್ದೇಶ ಒಮ್ಮೆ ಸರ್ಕಾರದಿಂದ ವಸತಿ ಸೌಲಭ್ಯ ಪಡೆದ ಫಲಾನುಭವಿಯು ಮತ್ತೊಮ್ಮೆ ಯಾವುದೇ ಯೋಜನೆಯಡಿ ವಸತಿ ಸೌಲಭ್ಯವನ್ನು ಪಡೆಯಬಾರದೆಂದು, ಬಡ ಫಲಾನುಭವಿಗಳಿಂದ ಇತರರಿಗೆ ಪರಭಾರೆಯಾಗುವುದನ್ನು ತಪ್ಪಿಸುವ ದೃಷ್ಟಿಯಿಂದ ಹಾಗೂ ಸರ್ಕಾರದ ಅನುದಾನ ದುರುಪಯೋಗವಾಗುವುದನ್ನು ತಪ್ಪಿಸಲು ಅಡಮಾನ ಪ್ರಕ್ರಿಯೆಯನ್ನು ಜಾರಿಗೆ ತರಲಾಗಿರುತ್ತದೆ. ಆದ್ದರಿಂದ ಬಾಕಿ ಸಾಲ ಹಾಗೂ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಿದ ನಂತರವೂ ಸಹಾ 15 ವರ್ಷಗಳ ಅವಧಿಗೆ ಮಾಡಿರುವ ಅಡಮಾನವು ಮುಂದುವರೆಯುತ್ತದೆ.

4. ಫಲಾನುಭವಿಯು ಸರ್ಕಾರಕ್ಕೆ ಮಾಡಿರುವ ಅಡಮಾನದಲ್ಲಿ ನಿರ್ಮಿಸಿದ ಮನೆಯನ್ನು ಇತರರಿಗೆ ಪರಭಾರೆ ಅಥವಾ ಬಾಡಿಗೆ ನೀಡುವುದಕ್ಕೆ ನಿರ್ಬಂಧವಿರುತ್ತದೆ ಆದರೆ ಸದರಿ ಫಲಾನುಭವಿಯು ರಾಷ್ಟ್ರೀಕೃತ ಬ್ಯಾಂಕ್/ಸಹಕಾರಿ ಬ್ಯಾಂಕ್ ಅಥವಾ ಯಾವುದೇ ಹಣಕಾಸು ಸಂಸ್ಥೆಗಳ ಮೂಲಕ ಸದರಿ ಮನೆಯನ್ನು ಎರಡನೇ ಅಡಮಾನ ಮಾಡಿ ಸಾಲ ಪಡೆಯಲು ಯಾವುದೇ ನಿರ್ಬಂಧವಿರುವುದಿಲ್ಲ. ಈ ಸಂಬಂಧ ಸ್ಥಳೀಯ ಸಂಸ್ಥೆಗಳು ಅವಶ್ಯವಿದಲ್ಲಿ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಎನ್.ಓ.ಸಿ(No Objection Certificate) ನೀಡಲು ಕ್ರಮ ಕೈಗೊಳ್ಳಬಹುದು.

5. ಸಾಲ ಮತ್ತು ಸಹಾಯಧನವನ್ನು ಬಡ್ಡಿ ಸಮೇತ ಮನ್ನಾ ಮಾಡಿದ ನಂತರ ಒಂದುವೇಳೆ ಸರ್ಕಾರದ ಸೌಲಭ್ಯವನ್ನು ಪಡೆದು ನಿರ್ಮಿಸಲಾದ ಮನೆಗಳಲ್ಲಿ ಮೂಲ ಫಲಾನುಭವಿಯು ವಾಸಿಸದೇ ಖಾಲಿ ಇರುವುದು ಅಥವಾ ಇತರರು ಅನಧಿಕೃತವಾಗಿ ವಾಸಿಸುತ್ತಿರುವುದು ಅಥವಾ ಬಾಡಿಗೆ/ಭೋಗ್ಯ/ಮಾರಾಟ ಹಾಗೂ ಇನ್ನಿತರ ವಿಧದಲ್ಲಿ ದುರುಪಯೋಗಪಡಿಸಿಕೊಂಡಿದ್ದಲ್ಲಿ ನಗರ ಪ್ರದೇಶಗಳಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಜಿಲ್ಲಾ ಪಂಚಾಯ್ತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಈ ಕೆಳಕಂಡಂತೆ ಕ್ರಮ ವಹಿಸುವುದು.

    ಅ. ಸ್ವಂತ ನಿವೇಶನದಲ್ಲಿ ಸರ್ಕಾರದ ಸಹಾಯಧನ ಪಡೆದು ಸ್ವಂತ ನಿವೇಶನದಲ್ಲಿ ಮನೆ ನಿರ್ಮಿಸಿಕೊಂಡ ಪ್ರಕರಣಗಳಲ್ಲಿ ಫಲಾನುಭವಿಗೆ ನೀಡಲಾಗಿರುವ ಸಾಲ ಮತ್ತು ಸಹಾಯಧನವನ್ನು ವಾರ್ಷಿಕ ಶೇ.11 ರ ಬಡ್ಡಿ ಸಮೇತ ಮೂಲ ಫಲಾನುಭವಿಯಿಂದ ವಸೂಲಿ ಮಾಡುವುದು. ಒಂದು ವೇಳೆ ಫಲಾನುಭವಿಯು ನಿಗದಿತ ಸಮಯದಲ್ಲಿ ಪಾವತಿ ಮಾಡದೆ ಹೋದಲ್ಲಿ ಅಂತಹವರಿಂದ ಬರಬೇಕಾದ ಸಂಪೂರ್ಣ ಸಹಾಯಧನವನ್ನು "ಭೂ ಕಂದಾಯ ಬಾಕಿ" ಎಂದು ವಸೂಲು ಮಾಡಲು ತಪ್ಪದೆ ಕ್ರಮ ಜರುಗಿಸುವುದು.

ಆ. ಸರ್ಕಾರದಿಂದ ನಿವೇಶನ ಮತ್ತು ಮನೆಯನ್ನು ಪಡೆದ ಪ್ರಕರಣಗಳಲ್ಲಿ ನಗರ ಪ್ರದೇಶಗಳಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಜಿಲ್ಲಾ ಪಂಚಾಯ್ತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಮಟ್ಟದ ಒಂದು ತನಿಖಾ ತಂಡವನ್ನು ರಚಿಸಿ ಅನಧಿಕೃತವಾಗಿ ವಾಸವಾಗಿರುವ ಫಲಾನುಭವಿಗಳು ಅರ್ಹರಿರುವ ಬಗ್ಗೆ ವರದಿಯನ್ನು ಪಡೆಯುವುದು.

ಒಂದು ವೇಳೆ ವಾಸವಿರುವ ಕುಟುಂಬಗಳು ಅರ್ಹರಾಗಿದ್ದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮಸಭೆ ಮತ್ತು ನಗರ ಪ್ರದೇಶದಲ್ಲಿ ಆಶ್ರಯ ಸಮಿತಿಯಲ್ಲಿ ಮಂಡಿಸಿ ಮೂಲ ಫಲಾನುಭವಿಗಳಿಗೆ ಮಾಡಲಾದ ಹಂಚಿಕೆ ಮತ್ತು ಹಕ್ಕುಪತ್ರಗಳನ್ನು ರದ್ದುಗೊಳಿಸಿ ಮೂಲ ಫಲಾನುಭವಿಗೆ ವಿತರಿಸಿದ ಸಾಲ ಮತ್ತು ಬಡ್ಡಿ ಮನ್ನಾ ಮಾಡಿ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ನೀಡುವುದು.

ಒಂದು ವೇಳೆ ವಾಸವಿರುವ ಕುಟುಂಬಗಳು ಅನರ್ಹರಾಗಿದ್ದಲ್ಲಿ ಅಂತಹವರನ್ನು ತೆರವುಗೊಳಿಸಿ ಅಥವಾ ಮನೆಗಳಲ್ಲಿ ವಾಸಿಸದೇ ಖಾಲಿಯಿದ್ದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮಸಭೆ ಮತ್ತು ನಗರ ಪ್ರದೇಶದಲ್ಲಿ ಆಶ್ರಯ ಸಮಿತಿಯ ಮೂಲಕ ಹೊಸದಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಹಕ್ಕುಪತ್ರಗಳನ್ನು ನೀಡುವುದು. ಮತ್ತು ಮೂಲ ಫಲಾನುಭವಿಗೆ ವಿತರಿಸಿದ ಸಾಲ ಮತ್ತು ಬಡ್ಡಿ ಮನ್ನಾ ಮಾಡುವುದು.

ಮೇಲಿನ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅನುಸರಿಸುವುದು ಮತ್ತು ಸಂಬಂಧಪಟ್ಟ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಈ ಸಂಬಂಧವಾಗಿ ಸೂಕ್ತ ಸೂಚನೆಗಳನ್ನು ನೀಡತಕ್ಕದ್ದು.

(ಬಿ.ಶಂಕರಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ವಸತಿ ಇಲಾಖೆ (ವಸತಿ-2).